ಪಿ. ಡಬ್ಲ್ಯೂಃ 1

**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 05 /09/2024 )**

**ಪಾಟೀ ಸವಾಲು :ಪ್ರತಿವಾದಿ ಪರ ಶ್ರೀ ಎಸ್ ಒ ಎನ್ ವಕೀಲರಿಂದ,**

ನಾನು ಭಟ್ಕಳದಲ್ಲಿ ವಾಸವಾಗಿರುತ್ತೇನೆ. ದಾವಾಸ್ತಿಯು ಬೆಳಕೆ ಗ್ರಾಮದಲ್ಲಿದೆ. ದಾವಾಸ್ತಿಯನ್ನು 1988 ರಲ್ಲಿ ಖರೀದಿ ಮಾಡಿರುತ್ತೇವೆ . ದಾವಾಸ್ತಿಯಲ್ಲಿ ತೆಂಗು , ಅಡಿಕೆ ಬೆಳೆಯುತ್ತೇವೆ. ದಾವಾಸ್ತಿಯ ಉತ್ತರಕ್ಕೆ ಸಣ್ಣದಾದ ಹಳ್ಳ ಇದೆ. ಹಳ್ಳವು ಪೂರ್ವ ಪಶ್ಚಿಮವಾಗಿ ಹರಿಯುತ್ತದೆ . ದಾವಾಸ್ತಿಯ ಹಳ್ಳಕ್ಕೆ ತಾಗಿ ಉತ್ತರಕ್ಕೆ ತಡೆಗೋಡೆಯನ್ನು ಕಾಂಕ್ರೀಟ್ ನಲ್ಲಿ ಕಟ್ಟಿರುತ್ತೇವೆ. ದಾವಾಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ತಡೆಗೋಡೆಯು ಕಲ್ಲು ಮಣ್ಣಿನಲ್ಲಿ ಅಸ್ತಿತ್ವದಲ್ಲಿತ್ತು ಅದನ್ನು ತೆಗೆದು ನಾವು ಕಾಂಕ್ರಿಟಿನಲ್ಲಿ ಕಟ್ಟಿರುತ್ತೇವೆ. ತಡೆಗೋಡೆಯನ್ನು ನಾವು ಓಡಾಡಲು ಹಾಗೂ ಮಳೆ ಬಂದರೆ ಜಮೀನಿನಲ್ಲಿಯ ಮಣ್ಣು ಕೊರೆದು ಹೋಗಬಾರದೆಂದು ಕಟ್ಟಿರುತ್ತೇವೆ. ದಾವಾಸ್ತಿಯ ಪಶ್ಚಿಮ ದಿಕ್ಕಿನಲ್ಲಿ ಬೇರೆಯವರ ಜಮೀನು ಇದೆ. ನಮ್ಮ ಜಮೀನಿನ ಮಧ್ಯದಲ್ಲಿಯೇ ಒಂದು ಎಕರೆ ಮೂರು ಗುಂಟೆ ಜಮೀನು ಕೊಂಕಣ ರೈಲ್ವೆ ನಿರ್ಮಾಣಕ್ಕೆ ಅಕ್ವಾಯರ್ ಮಾಡಲಾಗಿದೆ . ಸದರಿ ಅಕ್ವಾಯರ್ ಮಾಡಿರುವ ಜಮೀನಿನ ಪರಿಹಾರ ವು ಮೊದಲಿನ ಮಾಲೀಕರಿಗೆ ಸಿಕ್ಕಿದೆ ಎಂದರೆ ನನಗೆ ಗೊತ್ತಿಲ್ಲವೆಂದು ನುಡಿದಿರುತ್ತಾರೆ. ಜಮೀನನ್ನು ಖರೀದಿಸುವಾಗ ಎಲ್ಲಾ ಇತಿಹಾಸ ವಿಚಾರಿಸಿ ಖರೀದಿ ಮಾಡಲಾಗುತ್ತದೆ ಎಂದರೆ ಸರಿ. ಯಾವುದೇ ಜಮೀನು ಅಕ್ವಾಯರ್ ಆಗುವ ಮೊದಲು ಜಮಿನಿನ ಮಾಲೀಕರು ಭವಿಷ್ಯದಲ್ಲಿ ಆಗುವ ಹಾನಿಯನ್ನು ಗಮನದಲ್ಲಿಟ್ಟುಕೊಂಡು ಪರಿಹಾರ ಕೇಳುತ್ತಾರೆ ಎಂದರೆ ಸರಿಯಲ್ಲ. ಯಾವ ಇಸವಿಯಲ್ಲಿ ರೈಲ್ವೆ ಬ್ರೀಜ್ ಕಟ್ಟಲಾಗಿದೆ ಎಂದು ನನಗೆ ನೆನಪಿಲ್ಲ. ರೈಲ್ವೆ ಬ್ರಿಜ್ ನಿಷ್ಕಾಳಜಿಯಿಂದ ಅಡ್ಡಲಾಗಿ ಕಟ್ಟಿದ್ದರಿಂದ ಮಳೆ ಬಂದಾಗ ಫ್ಲಡ್ ನೀರು ಬಂದು ನಮ್ಮ ಜಮೀನಿಗೆ ಬಡಿದು ಹಾನಿ ಮಾಡುತ್ತದೆ. ಬ್ರಿಜ್ ಅವೈಜ್ಞಾನಿಕವಾಗಿ ಕಟ್ಟಿದ್ದ ಬಗ್ಗೆ ನಾನು ಲೀಗಲ್ ಒಪಿನಿಯನ್ ಪಡೆದಿಲ್ಲ ಆದರೆ ನಮಗೆ ಕಾಣುತ್ತದೆ. ಬ್ರೀಜ್ ಅನ್ನು ನಾವು ಜಮೀನು ಖರೀದಿ ಮಾಡುವ ಪೂರ್ವದಲ್ಲಿ ಕಟ್ಟಿದ್ದಾರೆ ಅಥವಾ ನಂತರ ಕಟ್ಟಿದ್ದಾರೆ ಎಂದರೆ ಖರೀದಿ ಮಾಡುವ ಪೂರ್ವದಲ್ಲಿಯೂ ಸಹ ನಾವೇ ಸಾಗುವಳಿ ಮಾಡುತ್ತಿದ್ದೇವೆಂದು ಉತ್ತರಿಸಿರುತ್ತಾರೆ. ಬ್ರೀಜ್ ಅನ್ನು ಅವೈಜ್ಞಾನಿಕವಾಗಿ ಕಟ್ಟಿರುವ ಬಗ್ಗೆ ಪೊಟೋಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಇರುತ್ತದೆ. ತಡೆಗೋಡೆಯನ್ನು ಯಾರ

ಅನುಮತಿಯಿಂದ ಕಟ್ಟಿದ್ದೀರಾ ಎಂದರೆ ಮೊದಲೇ ಇತ್ತು ಅದನ್ನು ನಾವು ಕಾಂಕ್ರೀಟಿನಿಂದ ಮಾತ್ರ ಕಟ್ಟಿರುತ್ತೇವೆಂದು ಉತ್ತರಿಸಿರುತ್ತಾರೆ. ತಡಕೆಗೋಡೆ ಕಟ್ಟಲು ಯಾರು ತಕರಾರು ಮಾಡದೇ ಇದ್ದರೂ ಅನುಮತಿ ಪಡೆಯಲು ನಿಮಗೆ ತೊಂದರೆ ಇರಲಿಲ್ಲ ಎಂದರೆ ಅವಶ್ಯಕತೆ ಇಲ್ಲವೆಂದು ಉತ್ತರಿಸಿರುತ್ತಾರೆ. ಮಳೆಗಾಲದಲ್ಲಿ ಸಾಧಾರಣವಾಗಿ ಎಲ್ಲಾ ಹಳ್ಳಗಳು ತುಂಬಿ ಹರಿಯುತ್ತವೆ ಎಂದರೆ ನನಗೆ ಗೊತ್ತಿಲ್ಲವಂದು ಉತ್ತರಿಸಿರುತ್ತಾರೆ. 2020 ರಲ್ಲಿ ನಗರದಲ್ಲಿ ಫ್ಲಡ್ ಬಂದಿರುವ ಬಗ್ಗೆ ನನಗೆ ಗೊತ್ತಿಲ್ಲ ಆದರೆ ನಮ್ಮ ಜಮೀನಿನಲ್ಲಿ ಬಂದಿತ್ತು. ರೈಲ್ವೆ ಬ್ರೀಜ್ ಕಟ್ಟುವಾಗ ರೈಲ್ವೆ ಇಲಾಖೆಯ ಇಂಜೇನಿಯರ್ ಅವರಿಗೆ ನೀರಿನ ಹಳ್ಳದ ದಾರಿಯನ್ನು ಬದಲಾಯಿಸಬೇಡಿ ಎಂದು ನಾವು ಮೌಖಿಕವಾಗಿ ಹೇಳಿರುತ್ತೇವೆ. ರೈಲ್ವೆ ಬೌಂಡ್ರಿ ಲೈನ್ ಅನ್ನು ಕಲ್ಲು ಇಟ್ಟು ಗುರುತು ಮಾಡಿದ್ದಾರೆ. ತಡೆಗೋಡೆ ಕಟ್ಟಲು ಸುಮಾರು ರೂ. ನಾಲ್ಕು ಲಕ್ಷ ಖರ್ಚು ಆಗಿರುತ್ತದೆ. ರೂ. ನಾಲ್ಕು ಲಕ್ಷ ಖರ್ಚಾದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ನಮ್ಮ ಸ್ವಂತ ಉಪಯೋಗಕ್ಕೆ ಮಾಡಿಕೊಂಡಿರುತ್ತೇವೆಂದು ಉತ್ತರಿಸಿರುತ್ತಾರೆ. ನಾನು 1999 ರಿಂದ 2004 ಹಾಗೂ 2008 ರಿಂದ 2013 ರವರೆಗೆ ವಿಧಾನಸಭೆಯ ಅಸೆಂಬ್ಲಿ ಸದಸ್ಯನಾಗಿದ್ದೇನು. ತಡೆಗೋಡೆಯನ್ನು ಕಟ್ಟಲು ನಾನು ಸರಕಾರದ ಹಣವನ್ನು ಉಪಯೋಗಿಸಿದ್ದೇನೆ ಎಂದರೆ ನಾನು ಶಾಸಕನಾದಾಗ ಮನೆಕಟ್ಟಲು ಸರಕಾರವು ನನಗೆ ಹಣ ನೀಡಿಲ್ಲವೆಂದು ಉತ್ತರಿಸಿರುತ್ತಾರೆ. ಪ್ರತಿವಾದಿಗಳು ಸರಿಯಾಗಿ ವೈಜ್ಞಾನಿಕವಾದ ರೀತಿಯಲ್ಲಿ ನಮ್ಮ ಒಪ್ಪಿಗೆಯ ಮೇರೆಗೆ ಬ್ರಿಜ್ ಅನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಬ್ರೀಜ್ ನಿಂದ ಆದ ಹಾನಿಯನ್ನು ಯಾವ ರೀತಿ ಅಳತೆ ಮಾಡಿ ಮೌಲ್ಯವನ್ನು ನಿರ್ಧರಿಸಿದ್ದೇನೆ ಎಂದರೆ ನನಗೆ ಖರ್ಚಾದ ಬಗ್ಗೆ ನನಗೆ ಮಾಹಿತಿ ಇದೆ ಎಂದು ಉತ್ತರಿಸಿರುತ್ತಾರೆ .ತಡೆಗೋಡೆಗೆ ಹಾನಿಯಾದ ಬಗ್ಗೆ ಪೊಟೋಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ತಡೆಗೋಡೆಯು 50 ಮೀಟರ್ ವರೆಗೆ ಇದೆ. ಹಾನಿಯು ಪ್ರತಿವಾದಿಯ ತಪ್ಪಿನಿಂದ ಆಗಿದ್ದು ಅಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಫ್ಲಡ್ ಬರುವುದು ಗೊತ್ತಿದ್ದರೂ ಸಹ ನಾನೇ ತಡೆಗೋಡೆಯನ್ನು ಕಟ್ಟಿ ಹಾನಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಫ್ಲಡ್ ಬರುವುದು ನೈಸರ್ಗಿಕವಾಗಿದೆ ಎಂದರೆ ಸರಿಯಲ್ಲ. ಪ್ರತಿವಾದಿಯು ದಾವಾ ಜಮೀನಿನಲ್ಲಿ ಫ್ಲಡ್ ಬಂದಾಗ ಯಾವುದೇ ಹಾನಿಯಾದಾಗ ಅದರ ಹಾನಿಯನ್ನು ಕೊಡುತ್ತೇವೆಂದು ಲಿಖಿತದಲ್ಲಿ ಹೇಳಿದ್ದಾರಾ

ಎಂದರೆ ಮೌಖಿಕವಾಗಿ ಹೇಳಿದ್ದರು ಎಂದು ಉತ್ತರಿಸಿರುತ್ತಾರೆ. ಪ್ರತಿವಾದಿಯ ಯಾವುದೇ ರೀತಿಯ ಹಾನಿಗೆ ನಾವು ಜವಾಬ್ದಾರರಲ್ಲ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಹಾನಿಯನ್ನು ಕೊಡುತ್ತೇನೆಂದು ಹೇಳಿದ ಬಗ್ಗೆ ಲಿಖಿತವಾಗಿ ನಾನು ಕೇಳಿದ್ದು ಅಧಿಕಾರಿಗಳು ನೀಡಿರುವುದಿಲ್ಲ. ನೊಟೀಸನ್ನು ನಾನು ಜನರಲ್ ಮ್ಯಾನೇಜರ್, ಚೀಪ್ ಇಂಟನೀಯರ್ ಮತ್ತು ಪ್ರೊಜೇಕ್ಟ ಮ್ಯಾನೇಜರ್ ರವರಿಗೆ ನೀಡಿರುತ್ತೇನೆ. ಪ್ರೊಜೇಕ್ಟ ಮ್ಯಾನೇಜರ್ ಪ್ರತಿವಾದಿಯ ಕಚೇರಿಯಲ್ಲಿ ಯಾರು ಇಲ್ಲ ಎಂದರೆ ನಾನು ಮಾಹಿತಿ ಪಡೆದೇ ನೋಟೀಸು ನೀಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಸದರಿ ಹಾನಿಗೆ ಪ್ರತಿವಾದಿಯು ಜವಾಬ್ದಾರರಲ್ಲ ಎಂದರೆ ಸರಿಯಲ್ಲ. ಬ್ರೀಜ್ ಕಟ್ಟುವಾಗ ನಮಗೆ ತಡೆಯಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಅವರು ನಿಮ್ಮ ಆಸ್ತಿಗೆ ತೊಂದರೆಯಾದರೆ ನಾವು ಬ್ರೀಜ್ ನ ರೂಪವನ್ನು ಬದಲಾಯಿಸುತ್ತೇವೆ ಎಂದು ಮಾತು ಆಗಿತ್ತು. ಬ್ರಿಜ್ ಕಟ್ಟುತ್ತಿರುವಾಗ ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ನೀಡಲು ನನಗೆ ಯಾವುದೇ ತೊಂದರೆ ಇರಲ್ಲಿಲ್ಲ. ಪ್ರತಿವಾದಿಯಿಂದ ಹಣ ಪಡೆಯಲು ಸುಳ್ಳು ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಹಾನಿಯಾದ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಹಾನಿಗೆ ಪ್ರತಿವಾದಿ ಜವಾಬ್ದಾರರಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರಧಾನ ಸಿವಿಲ್ ಜಡ್ಜ್, ಭಟ್ಕಳ.**